ತಾಃ 25-04-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ಈಗ ನನಗೆ ತೋರಿಸುತ್ತಿರುವ ನಿಪಿ-28 ಮತ್ತು 24 ಭಾವ ಚಿತ್ರಗಳನ್ನು ನೋಡುತ್ತಿದ್ದೇನೆ. ಸದರಿ ಭಾವ ಚಿತ್ರಗಳಲ್ಲಿ ಕಂಡು ಬರುವ ಸ್ಕೂಟರ್ ಕೆಎ-05 ಆರ್ 3975 ಇದನ್ನು ಮತ್ತು ನಿಪಿ-30 ಭಾವ ಚಿತ್ರದಲ್ಲಿ ಕಂಡು ಬರುವ ಆಯುಧಗಳನ್ನು ಇಬ್ಬರು ಆರೋಪಿತರಿಂದ ವಶಪಡಿಸಿಕೊಂಡಿದ್ದೆನು.

**ಪಾಟೀ ಸವಾಲುಃ 1, 4, 5 ಆರೋಪಿತರ ಪರ ಶ್ರೀ ಎಂ ಬಿ ಎಸ್ ವಕೀಲರಿಂದ ಃ**

ನನ್ನನ್ನು ಗಸ್ತು ಕೆಲಸಕ್ಕೆ ನೇಮಿಸಿದ್ದರ ಕುರಿತು ಸ್ಟೇಷನ್ ಡೈರಿಯಲ್ಲಿ ಎಂಟ್ರಿ ಮಾಡಿದ್ದರು. ಘಟನಾ ಸ್ಥಳ 7ನೇ ಬೀಟ್‌ಗೆ ಸಂಬಂಧಪಟ್ಟಿದ್ದು ಇತ್ತು, ಘಟನೆಯ ದಿನ 7ನೇ ಬೀಟ್‌ಗೆ ಪ್ರತ್ಯೇಕವಾಗಿ ಸಿಬ್ಬಂದಿಯನ್ನು ನೇಮಿಸಿರಲಿಲ್ಲ, ನಾವು ಕೆಲಸ ಮಾಡುವುದನ್ನು ನಮ್ಮ ನೋಟ್ ಬುಕ್‌ನಲ್ಲಿ ಬರೆಯಬೇಕಾಗುತ್ತದೆ ಎಂದರೆ ಸರಿ. ದಿನಾಂಕ 23.02.2014 ರಂದು ನಾನು ಮಾಡಿದ ಕೆಲಸದ ಕುರಿತು ನೋಟ್ ಬುಕ್‌ನಲ್ಲಿ ಬರೆದಿರುತ್ತೇನೆ. ಸದರಿ ನೋಟ್ ಬುಕ್ಕನ್ನು ನಾನು ತನಿಖಾಧಿಕಾರಿಗಳಿಗೆ ಕೊಟ್ಟಿಲ್ಲ, ಬೆಳಗಿನ ಜಾವ ಖಾನಿಮಠದ ಬಳಿ ಸಾಕಷ್ಟು ಜನ ಸಾರ್ವಜನಿಕರು ಅಡ್ಡಾಡುತ್ತಿರುತ್ತಾರೆ ಎಂದರೆ ಸರಿಯಲ್ಲ, ಖಾನಿಮಠದ ರಸ್ತೆ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವುದರಿಂದ

ಅಲ್ಲಿ ಸಾಕಷ್ಟು ವಾಹನಗಳು ಹೋಗುವುದು ಬರುವುದು ಮಾಡುತ್ತವೆ ಎಂದರೆ ಸರಿ. ಆರೋಪಿಗಳನ್ನು ಹಿಡಿದುಕೊಂಡ ಸ್ಥಳದಲ್ಲಿ ಮಹಜರ್ ಮಾಡಿಲ್ಲ. ಆರೋಪಿಗಳನ್ನು ಹಿಡಿದುಕೊಳ್ಳುವ ಪೂರ್ವದಲ್ಲಿ ನಮ್ಮ ಬೈಕಿನಲ್ಲಿ ಮತ್ತು ನಮ್ಮ ಬಳಿ ಏನೇನು ವಸ್ತುಗಳಿವೆ ಅನ್ನುವುದರ ಕುರಿತು ಅಂಗ ಜಪ್ತಿ ಪಂಚನಾಮೆ ಮಾಡಿರಲಿಲ್ಲ. ಖಾನಿಮಠದ ಬಳಿ ನಾನು ಮೋಟರ್ ಬೈಕ್‌ನಲ್ಲಿ ಬಂದಿದ್ದೆನು. ಮೋಟರ್ ಬೈಕ್‌ಗಳಲ್ಲಿ ಸಾಮಾನ್ಯವಾಗಿ ಟೂಲ್ಸ್ ಕಿಟ್ ಇರುತ್ತವೆ ಎಂದರೆ ಸರಿ. ಅಂದು ನಾವು ಹಿಡಿದುಕೊಂಡ ಆರೋಪಿತರು ಯಾವ ತೆರನಾದ ಹಾಗೂ ಯಾವ ಕಲರ್‌ನ ಬಟ್ಟೆಗಳನ್ನು ಧರಿಸಿದ್ದರು ಅನ್ನುವುದು ನನಗೆ ಹೇಳಲು ಬರುವುದಿಲ್ಲ. ಆರೋಪಿತರನ್ನು ವಶಕ್ಕೆ ಪಡೆದಿದ್ದರ ಕುರಿತು ಆ ಸ್ಥಳದಲ್ಲಿ ಯಾವುದೇ ಸ್ಥಳೀಯರ ಹೇಳಿಕೆಗಳನ್ನು ನಾವು ಪಡೆದುಕೊಳ್ಳಲಿಲ್ಲ. ನಿಪಿ-30 ಭಾವ ಚಿತ್ರದಲ್ಲಿ ಒಂದು ಕಡೆ ಬಾಯಿ ಇರುವ ಸ್ಪ್ಯಾನರ್ ಇರುವುದಿಲ್ಲ ಎಂದರೆ ಸರಿ. ನಿಪಿ-30 ಭಾವ ಚಿತ್ರದಲ್ಲಿ ಕಂಡು ಬರುವ ವಸ್ತುಗಳು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ಪೋಲೀಸ್ ಠಾಣೆಯ ಆವರಣದಲ್ಲಿ ಕ್ಲೇಮ್ ಮಾಡದೇ ಇರುವಂತಹ ಸಾಕಷ್ಟು ವಾಹನಗಳು ಇರುತ್ತವೆ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ಪೋಲೀಸ್ ಠಾಣೆಯ ಆವರಣದಲ್ಲಿ ವಾರಸುದಾರರಿಲ್ಲದ ವಾಹನಗಳು ಇರುವುದಿಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-28 ಮತ್ತು 29 ಭಾವ ಚಿತ್ರಗಳಲ್ಲಿ ಕಂಡು ಬರುವ ಸ್ಕೂಟರ್ ಆರೋಪಿಗಳಿಂದ ವಶಪಡಿಸಿಕೊಂಡ ಸ್ಕೂಟರ್ ಅಲ್ಲ ಎಂದರೆ ಸರಿಯಲ್ಲ.

ನಾನು ನನ್ನ ಸಾಕ್ಷ್ಯದ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ ಯಾವುದೇ ಘಟನೆ ನಡೆದಿರುವುದೇ ಇಲ್ಲ ಎಂದರೆ ಸರಿಯಲ್ಲ. ದಿನಾಂಕ 23.02.2014 ರಂದು ನಾನು ನನ್ನ ಸಾಕ್ಷ್ಯದ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾವು ಯಾರೂ ಖಾನಿಮಠದ ಬಳಿ ಹೋಗಿರಲೇ ಇಲ್ಲ ಮತ್ತು ಯಾವುದೇ ಆರೋಪಿತರನ್ನು ಅಲ್ಲಿ ವಶಕ್ಕೆ ಪಡೆದಿಲ್ಲ ಮತ್ತು ಅವರಿಂದ ಯಾವುದೇ ವಾಹನ ಹಾಗೂ ವಸ್ತುಗಳನ್ನು ವಶಪಡಿಸಿಕೊಂಡಿರುವುದೇ ಇಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗಳನ್ನು ಅವರುಗಳ ಮನೆಯಿಂದ ಕರೆದುಕೊಂಡು ಬಂದು ಠಾಣಾಧಿಕಾರಿಗಳ ಮುಂದೆ ಹಾಜರುಪಡಿಸಿ ಸುಳ್ಳು ದೂರು ಕೊಟ್ಟಿದ್ದೆನು ಎಂದರೆ ಸರಿಯಲ್ಲ.

**<u>ಪಾಟೀ ಸವಾಲು 2ನೇ ಆರೋಪಿ ಪರ ಶ್ರೀ ವಿ ವಿ ಎಸ್ ವಕೀಲರಿಂದಃ</u>**

2ನೇ ಆರೋಪಿತನ ತಂದೆ ಹೆಸರು ಮಹದೇವಪ್ಪ ಇರಬಹುದು. ನಾನು ನನ್ನ ಸಾಕ್ಷ್ಯದ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ 2ನೇ ಆರೋಪಿತನನ್ನು ವಶಕ್ಕೆ ಪಡೆದಿರಲಿಲ್ಲ ಮತ್ತು ಆರೋಪಿತನ ಹೆಸರು ಮತ್ತು ಆತನ ತಂದೆಯ ಹೆಸರಿನ ಕುರಿತು ವಿಚಾರಿಸಿರಲೇ ಇಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ನನನಗೆ 2ನೇ ಆರೋಪಿತನ ತಂದೆ ಹೆಸರು ಹೇಳಲು ಬರುತ್ತಿಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಶ್ರೀ ವಿ ವಿ ಎಸ್ ವಕೀಲರು ಉಳಿದ ಪಾಟೀ ಸವಾಲು ಈಗಾಗಲೇ 1, 4, 5 ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲಿನಂತೆ 2ನೇ ಆರೋಪಿ ಪರ ಪಾಟೀ ಸವಾಲು ಇದೆ ಎಂದು ಪರಿಗಣಿಸಲು ಕೇಳಿಕೊಂಡಿರುತ್ತಾರೆ.)**

**<u>ಪಾಟೀ ಸವಾಲು 6ನೇ ಆರೋಪಿ ಪರ ವಕೀಲರಿಂದಃ</u>**

**(**6ನೇ ಆರೋಪಿ ಪರ ವಕೀಲರನ್ನು ಪುಕಾರಿಸಲಾಗಿ ಗೈರು ಹಾಜರಿದ್ದು 6ನೇ ಆರೋಪಿತನಿಗೆ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಗಿ ಸದರಿಯವನು ಉಳಿದ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಂತೆ ತನ್ನ ಪರ ಪಾಟೀ ಸವಾಲು ಇದೆ ಎಂದು ಪರಿಗಣಿಸಲು ಕೇಳಿಕೊಂಡಿರುತ್ತಾರೆ**).**

**{**ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ**.}**

ಓ ಹೇ ಸಾ ಸ ಸಹಿ ಮಾಡಿದ್ದಾರೆ**.**

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**,**
ಬೆಂಗಳೂರು ಗ್ರಾಮಾಂತರ ಜಿಲ್ಲೆ**,** ಬೆಂಗಳೂರು**.**